



(ಅವತೀರ್ಣ - ಮದೀನಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

1. ಸಂದೇಶವಾಹಕರೇ, ನೀವು ಸ್ತ್ರೀಯರಿಗೆ ತಲಾಕ್ ಕೊಡುವಾಗ ಅವರಿಗೆ ಅವರ ಇದ್ದತ್‌ಗಾಗಿ ತಲಾಕ್ ಕೊಡಿರಿ.[1] ಮತ್ತು ಇದ್ದತಿನ ಕಾಲಾವಧಿಯನ್ನು ಸರಿಯಾಗಿ ಎಣಿಸಿರಿ ಮತ್ತು ನಿಮ್ಮ ಪ್ರಭುವಾದ ಅಲ್ಲಾಹನನ್ನು ಭಯಪಡಿರಿ.[2] (ಇದ್ದತಿನ ಕಾಲಾವಧಿಯಲ್ಲಿ) ಅವರು ಸ್ಪಷ್ಟವಾದ ಅಶ್ಲೀಲ ಕಾರ್ಯವೆಸಗದಿರುವಾಗ[3] ನೀವು ಅವರನ್ನು ಅವರ ಮನೆಗಳಿಂದ ಹೊರ ಹಾಕಬಾರದು ಮತ್ತು ಅವರಾಗಿಯೂ ಹೊರಟು ಹೋಗಬಾರದು.[4] ಅಲ್ಲಾಹನು ನಿಶ್ಚಯಿಸಿದ ಮೇರೆಗಳಿವು. ಅಲ್ಲಾಹನ ಮೇರೆಗಳನ್ನು ಮೀರುವವನು ತನ್ನ ಮೇಲೆ ತಾನೇ ಅಕ್ರಮವೆಸಗುವನು. ಪ್ರಾಯಶಃ ಇದಾದ

بِسْمِ اللّٰهِ الرَّحْمٰنِ الرَّحِيْمِ○

يٰٓاَيُّهَا النَّبِيُّ اِذَا طَلَّقْتُمُ النِّسَآءَ فَطَلِّقُوْهُنَّ
لِعِدَّتِهِنَّ وَاَحْصُوا الْعِدَّةَ ۚ وَاتَّقُوا
اللّٰهَ رَبَّكُمْ ۚ لَا تُخْرِجُوْهُنَّ مِنْۢ
بُيُوْتِهِنَّ وَلَا يَخْرُجْنَ اِلَّآ اَنْ يَّاْتِيْنَ
بِفَاحِشَةٍ مُّبَيِّنَةٍ ؕ وَتِلْكَ حُدُوْدُ
اللّٰهِ ؕ وَمَنْ يَّتَعَدَّ حُدُوْدَ اللّٰهِ فَقَدْ
ظَلَمَ نَفْسَهٗ ؕ لَا تَدْرِيْ لَعَلَّ اللّٰهَ

1. 'ಇದ್ದತ್‌ಗಾಗಿ ತಲಾಕ್ ಕೊಡಿರಿ' ಎಂಬುದಕ್ಕೆ ಎರಡು ಅರ್ಥಗಳಿದ್ದು ಇಲ್ಲಿ ಈ ಎರಡೂ ಅರ್ಥಗಳು ಅನ್ವಯವಾಗುತ್ತವೆ. ಮೊದಲನೆಯದಾಗಿ ಆರ್ತವ ಕಾಲದಲ್ಲಿ ಸ್ತ್ರೀಗೆ ತಲಾಕ್ ಕೊಡದಿರಿ. ಬದಲಾಗಿ ಇದ್ದತ್‌ನ ಅವಧಿಯನ್ನು ಆರಂಭಿಸಲು ಸಾಧ್ಯವಾಗುವ ಸ್ಥಿತಿಯಲ್ಲಿ ತಲಾಕ್ ನೀಡಿರಿ. ಎರಡನೆಯದಾಗಿ ಇದ್ದತ್‌ನ ಅವಧಿಯೊಳಗೆ ಸಂಬಂಧ ಪುನರ್‌ಸ್ಥಾಪಿಸುವ ಅವಕಾಶವಿಟ್ಟುಕೊಂಡು ತಲಾಕ್ ನೀಡಿರಿ. ಸಂಬಂಧ ಪುನರ್‌ಸ್ಥಾಪಿಸುವ ಅವಕಾಶವೇ ಇಲ್ಲದ ರೂಪದಲ್ಲಿ ತಲಾಕ್ ನೀಡದಿರಿ. ಈ ಆದೇಶಕ್ಕೆ ಹದೀಸ್‌ನಲ್ಲಿ ದೊರೆಯುವ ವಿವರಣೆಯ ಆಧಾರದಲ್ಲಿ ತಲಾಕ್‌ನ ನಿಯಮ ಇಂತಿದೆ. ಆರ್ತವ ಕಾಲದಲ್ಲಿ ತಲಾಕ್ ನೀಡಬಾರದು. ಪತ್ನಿಯೊಂದಿಗೆ ಸಂಸರ್ಗ ನಡೆಸಿರದಂತಹ ಶುದ್ಧಾವಸ್ಥೆಯಲ್ಲಿ ತಲಾಕ್ ನೀಡಬೇಕು. ಇಲ್ಲವೇ ಗರ್ಭಿಣಿಯಾಗಿರುವ ವಿಷಯ ತಿಳಿದ ನಂತರ ತಲಾಕ್ ನೀಡಬೇಕು. ಹಾಗೆಯೇ ಒಂದೇ ಬಾರಿಗೆ ಮೂರು ತಲಾಕನ್ನೂ ನೀಡಬಾರದು.
2. ಅರ್ಥಾತ್- ತಲಾಕನ್ನು ತಮಾಷೆಯೆಂದು ಪರಿಗಣಿಸದಿರಿ. ತಲಾಕ್‌ನಂತಹ ಪ್ರಮುಖ ಸಮಸ್ಯೆ ತಲೆದೋರಿದಾಗ ಯಾವಾಗ ತಲಾಕ್ ನೀಡಬೇಕು, ಇದ್ದತ್ ಯಾವಾಗ ಆರಂಭಗೊಂಡು ಯಾವಾಗ ಕೊನೆಗೊಳ್ಳುತ್ತದೆ ಎಂದೂ ನೆನಪಿರದಂತಹ ಸ್ಥಿತಿ ನಿಮಗೆ ಎದುರಾಗಬಾರದು. ತಲಾಕ್ ಕೊಡುವಾಗ ಅದರ ಸಮಯ ಮತ್ತು ದಿನಾಂಕವನ್ನೂ ನೆನಪಿಡಬೇಕು. ಯಾವ ಪರಿಸ್ಥಿತಿಯಲ್ಲಿ ಸ್ತ್ರೀಗೆ ತಲಾಕ್ ನೀಡಲಾಗಿದೆ ಎಂಬುದನ್ನೂ ನೆನಪಿನಲ್ಲಿಡಬೇಕು.
3. ಅರ್ಥಾತ್- ಆಕೆ ದುರಾಚಾರಕ್ಕೀಡಾಗಿದ್ದರೆ ಅಥವಾ 'ಇದ್ದತ್' ಅವಧಿಯಲ್ಲಿ ಜಗಳಾಡುತ್ತಲೂ ಬಯ್ಯುತ್ತಲೂ ಇದ್ದರೆ.
4. ಅರ್ಥಾತ್ ಪುರುಷ ಸಿಟ್ಟಿನಿಂದ ಸ್ತ್ರೀಯನ್ನು ಮನೆಯಿಂದ ಹೊರಹಾಕಬಾರದು. ಹಾಗೆಯೇ ಸ್ತ್ರೀ ಸ್ವತಃ ಸಿಟ್ಟಾಗಿ ಮನೆಯನ್ನು ಬಿಡಬಾರದು. ಇದ್ದತ್ ಅವಧಿ ಮುಗಿಯುವ ತನಕವೂ ಅದು ಆಕೆಯ ಮನೆಯಾಗಿದೆ. ಹೊಂದಾಣಿಕೆಯ ಯಾವುದೇ ಸಾಧ್ಯತೆಯನ್ನು ಸದುಪಯೋಗಿಸಲು ಇಬ್ಬರೂ ಆ ಮನೆಯಲ್ಲೇ ಇರಬೇಕು. ಇಬ್ಬರೂ ಒಂದೇ ಮನೆಯಲ್ಲಿದ್ದರೆ ಮೂರು ತಿಂಗಳು, ಮೂರು ಆರ್ತವ ಕಾಲ ಅಥವಾ ಗರ್ಭಿಣಿಯಾಗಿದ್ದರೆ ಪ್ರಸವದ ತನಕ ಹೊಂದಾಣಿಕೆಯ ಇಂತಹ ಪ್ರಸಂಗಗಳು ಅನೇಕ ಬಾರಿ ತಲೆದೋರುತ್ತಿರಬಹುದು.

ಬಳಿಕ ಅಲ್ಲಾಹನು (ಹೊಂದಾಣಿಕೆಯ) ಯಾವುದಾದರೂ ದಾರಿಯನ್ನು ಉಂಟು ಮಾಡಲೂಬಹುದು- ನಿಮಗೆ ಅರಿಯದು.

يُحْدِثُ بَعْدَ ذٰلِكَ اَمْرًا ①

2. ಅನಂತರ ಅವರು ತಮ್ಮ(ಇದ್ದತಿನ) ಕಾಲಾವಧಿಯ ಕೊನೆಯನ್ನು ತಲುಪಿದಾಗ ಅವರನ್ನು ಉತ್ತಮ ರೀತಿಯಿಂದ (ನಿಮ್ಮ ವಿವಾಹದಲ್ಲಿ) ತಡೆದಿರಿಸಿಕೊಳ್ಳಿರಿ. ಇಲ್ಲವೆ ಉತ್ತಮ ರೀತಿಯಿಂದ ಅವರಿಂದ ಬೇರ್ಪಡಿರಿ ಮತ್ತು ನಿಮ್ಮ ಪೈಕಿ ನ್ಯಾಯಶೀಲರಾದ ಇಬ್ಬರನ್ನು ಸಾಕ್ಷಿಗಳಾಗಿ ಮಾಡಿಕೊಳ್ಳಿರಿ[5] ಮತ್ತು (ಸಾಕ್ಷಿಗಳಾಗುವವರೇ,) ಸಾಕ್ಷ್ಯವನ್ನು ಸರಿಯಾದ ರೀತಿಯಲ್ಲಿ ಅಲ್ಲಾಹನಿಗಾಗಿಯೇ ನೀಡಿರಿ. ನಿಮಗೆ ಉಪದೇಶಿಸಲಾಗುತ್ತಿರುವ ವಿಷಯಗಳಿವು. ಅಲ್ಲಾಹನ ಮತ್ತು ಪರಲೋಕದ ಮೇಲೆ ವಿಶ್ವಾಸವಿರಿಸುವ ಪ್ರತಿಯೊಬ್ಬನಿಗೆ.[6] ಅಲ್ಲಾಹನನ್ನು ಭಯಪಡುತ್ತ ಕಾರ್ಯವೆಸಗುವವನಿಗೆ ಅಲ್ಲಾಹನು ಸಂಕಷ್ಟಗಳಿಂದ ಪಾರಾಗುವ ಯಾವುದಾದರೂ ದಾರಿಯನ್ನು ತೆರೆಯುವನು-

فَاِذَا بَلَغْنَ اَجَلَهُنَّ فَاَمْسِكُوْهُنَّ بِمَعْرُوْفٍ اَوْ فَارِقُوْهُنَّ بِمَعْرُوْفٍ وَّ اَشْهِدُوْا ذَوَیْ عَدْلٍ مِّنْكُمْ وَ اَقِيْمُوا الشَّهَادَةَ لِلّٰهِ ؕ ذٰلِكُمْ يُوْعَظُ بِهٖ مَنْ كَانَ يُؤْمِنُ بِاللّٰهِ وَ الْيَوْمِ الْاٰخِرِ ؕ وَمَنْ يَّتَّقِ اللّٰهَ يَجْعَلْ لَّهٗ مَخْرَجًا ②

3. ಮತ್ತು ಅವನು ಊಹಿಸಿಯೂ ಇರದಂತಹ ಕಡೆಗಳಿಂದ ಅವನಿಗೆ ಜೀವನಾಧಾರ ನೀಡುವನು. ಅಲ್ಲಾಹನ ಮೇಲೆ ಭರವಸೆ ಇಡುವವನ ಪಾಲಿಗೆ ಅವನೇ ಸಾಕು. ಅಲ್ಲಾಹನು ತಮ್ಮ ಕಾರ್ಯವನ್ನು ಪೂರ್ತಿಗೊಳಿಸಿಯೇ ತೀರುತ್ತಾನೆ. ಅಲ್ಲಾಹನು ಪ್ರತಿಯೊಂದು ವಸ್ತುವಿಗೂ ಒಂದು ವಿಧಿಯನ್ನು ನಿಶ್ಚಯಿಸಿಟ್ಟಿರುತ್ತಾನೆ.

وَّ يَرْزُقْهُ مِنْ حَيْثُ لَا يَحْتَسِبُ ؕ وَمَنْ يَّتَوَكَّلْ عَلَى اللّٰهِ فَهُوَ حَسْبُهٗ ؕ اِنَّ اللّٰهَ بَالِغُ اَمْرِهٖ ؕ قَدْ جَعَلَ اللّٰهُ لِكُلِّ شَیْءٍ قَدْرًا ③

4. ನಿಮ್ಮ ಸ್ತ್ರೀಯರ ಪೈಕಿ ಋತುಸ್ರಾವದ ಬಗ್ಗೆ ನಿರಾಶರಾದವರ ಕುರಿತು ನಿಮಗೇನಾದರೂ ಸಂಶಯ ಬಂದರೆ, ಅವರ ಇದ್ದತಿನ ಅವಧಿಯು ಮೂರು ತಿಂಗಳಾಗಿದೆ. ಇನ್ನೂ ಋತುಮತಿಯರಾಗದವರಿಗೂ ಇದೇ ನಿಯಮವಿದೆ[7] ಮತ್ತು ಗರ್ಭಿಣಿಯರ ಇದ್ದತಿನ ಅವಧಿಯು

وَالّٰٓـِٔیْ يَئِسْنَ مِنَ الْمَحِيْضِ مِنْ نِّسَآئِكُمْ اِنِ ارْتَبْتُمْ فَعِدَّتُهُنَّ ثَلٰثَةُ اَشْهُرٍ ۙ وَّالّٰٓـِٔیْ لَمْ يَحِضْنَ ؕ وَاُولَاتُ الْاَحْمَالِ اَجَلُهُنَّ اَنْ يَّضَعْنَ حَمْلَهُنَّ ؕ

5. ಇದರರ್ಥ ತಲಾಕ್ ಅಥವಾ ಪುನರ್‌ಮಿಲನದ ಸಂದರ್ಭದಲ್ಲಿ ಸಾಕ್ಷಿಗಳನ್ನು ನಿಶ್ಚಯಿಸಿಕೊಳ್ಳಿರಿ.

6. ಇದರಿಂದ ಮೇಲೆ ನೀಡಲಾಗಿರುವ ನಿರ್ದೇಶಗಳು ಕಾನೂನಿನ ಸ್ಥಾನವನ್ನಲ್ಲ ಬದಲಾಗಿ ಉಪದೇಶದ ಸ್ಥಾನವನ್ನು ಹೊಂದಿದೆ ಎಂದು ವ್ಯಕ್ತವಾಗುತ್ತದೆ. ವ್ಯಕ್ತಿ ಮೇಲೆ ಸೂಚಿಸಲಾಗಿರುವ ನಿರ್ದೇಶಗಳಿಂದ ದೂರವಿದ್ದು ತಲಾಕ್ ನೀಡಿಬಿಟ್ಟರೆ, ಇದ್ದತ್‌ನ ಅವಧಿಯನ್ನು ಎಣಿಸದಿದ್ದರೆ, ಪತ್ನಿಯನ್ನು ವಿನಾಕಾರಣ ಮನೆಯಿಂದ ಹೊರಗಟ್ಟಿದರೆ, ಇದ್ದತ್‌ನ ನಂತರ ಪತ್ನಿಯನ್ನು ಸತಾಯಿಸುವ ಉದ್ದೇಶದಿಂದಲೇ ಸಂಬಂಧ ಪುನರ್‌ಸ್ಥಾಪಿಸಿದರೆ, ಜಗಳ ಕಾದು ಆಕೆಯನ್ನು ಬೀಳ್ಕೊಟ್ಟರೆ ಅಥವಾ ತಲಾಕ್, ಸಂಬಂಧ ಪುನರ್‌ಸ್ಥಾಪನೆ ಅಥವಾ ವಿಚ್ಛೇದನಗಳ ವೇಳೆ ಯಾರನ್ನೂ ಸಾಕ್ಷಿಯಾಗಿ ನಿಲ್ಲಿಸದಿದ್ದರೆ ಅಂತಹ ಸಂದರ್ಭದಲ್ಲೂ ತಲಾಕ್, ಸಂಬಂಧ ಪುನರ್‌ಸ್ಥಾಪನೆ ಅಥವಾ ವಿಚ್ಛೇದನದ ಕಾನೂನು ಪರ ಪರಿಣಾಮಗಳಲ್ಲಿ ಯಾವುದೇ ವ್ಯತ್ಯಾಸ ಉಂಟಾಗುವುದಿಲ್ಲ. ಆದರೆ ಅಲ್ಲಾಹನ ಉಪದೇಶಕ್ಕೆ ವಿರುದ್ಧವಾಗಿ ಹಾಗೆ ಮಾಡುವುದು ಅವನಲ್ಲಿ ದೇವನ ಮತ್ತು ಪರಲೋಕದ ಬಗ್ಗೆ ನೈಜ ವಿಶ್ವಾಸವಿಲ್ಲ ಎಂಬುದನ್ನು ಸೂಚಿಸುತ್ತದೆ. ಆದ್ದರಿಂದಲೇ ಅವನು ನೈಜ ಸತ್ಯವಿಶ್ವಾಸಿಯು ಎಂದೂ ಅನುಸರಿಸಬಾರದಂತಹ ಧೋರಣೆಯನ್ನು ಅನುಸರಿಸಿದನು.

7. ಅಪ್ರಾಪ್ತ ವಯಸ್ಸಿನಿಂದಾಗಿ ಋತುಸ್ರಾವವಾಗದೆ ಇರಬಹುದು. ಕೆಲವು ಸ್ತ್ರೀಯರಿಗೆ ಬಹಳ ತಡವಾಗಿ ಋತುಸ್ರಾವವಾಗುತ್ತದೆ. ಆ ಕಾರಣದಿಂದಾಗಿರಬಹುದು ಅಥವಾ ಕೆಲವು ಸ್ತ್ರೀಯರಿಗೆ ಜೀವನಪರ್ಯಂತ ಋತುಸ್ರಾವವಾಗದೆ ಇರುವ ಅಪರೂಪದ ಪ್ರಸಂಗಗಳೂ

ಅವರ ಪ್ರಸವದ ವರೆಗಿದೆ.[8] ಅಲ್ಲಾಹನು, ತನ್ನನ್ನು ಭಯಪಡುವವನ ವ್ಯವಹಾರದಲ್ಲಿ ಅನುಕೂಲತೆಯನ್ನು ಒದಗಿಸುತ್ತಾನೆ.

وَمَنْ يَّتَّقِ اللّٰهَ يَجْعَلْ لَّهٗ مِنْ اَمْرِهٖ يُسْرًا ④

5. ಇದು ಅಲ್ಲಾಹನು ನಿಮ್ಮ ಕಡೆಗೆ ಅವತೀರ್ಣಗೊಳಿಸಿರುವ ಅವನ ಅಪ್ಪಣೆಯಾಗಿದೆ. ಅಲ್ಲಾಹನು ತನ್ನನ್ನು ಭಯಪಡುವವನ ದೋಷ ಗಳನ್ನು ಅವನಿಂದ ಹೋಗಲಾಡಿಸುವನು ಮತ್ತು ಅವನಿಗೆ ದೊಡ್ಡ ಪ್ರತಿಫಲವನ್ನೂ ಕೊಡುವನು.

ذٰلِكَ اَمْرُ اللّٰهِ اَنْزَلَهٗۤ اِلَيْكُمْ ۗ وَمَنْ يَّتَّقِ اللّٰهَ يُكَفِّرْ عَنْهُ سَيِّاٰتِهٖ وَيُعْظِمْ لَهٗۤ اَجْرًا ⑤

6. (ಇದ್ದತ್‌ನ ಅವಧಿಯಲ್ಲಿ) ಅವರನ್ನು, ನೀವಿರುವ ಸ್ಥಳದಲ್ಲೇ ನಿಮ್ಮ ಸೌಲಭ್ಯಕ್ಕನುಸಾರವಾಗಿ ವಾಸಗೊಳಿಸಿರಿ- ಮತ್ತು ಅವರಿಗೆ ಬೇಸರವುಂಟು ಮಾಡಲಿಕ್ಕಾಗಿ ಅವರನ್ನು ಸತಾಯಿಸಬೇಡಿರಿ. ಅವರು ಗರ್ಭಿಣಿಯರಾಗಿದ್ದರೆ, ಅವರ ಪ್ರಸವ ಕಾಲದ ವರೆಗೂ ಅವರಿಗಾಗಿ ಖರ್ಚು ಮಾಡುತ್ತಲಿರಿ. ಅನಂತರ ಅವರು ನಿಮಗೋಸ್ಕರ (ಶಿಶುವಿಗೆ) ಸ್ತನಪಾನ ಮಾಡಿಸಿದರೆ, ಅವರಿಗೆ ಅವರ ಸಂಭಾವನೆ ಕೊಡಿರಿ ಮತ್ತು (ಸಂಭಾವನೆಯ ವಿಷಯ ವನ್ನು) ಪರಸ್ಪರ ಮಾತುಕತೆಯ ಮೂಲಕ ಉತ್ತಮ ರೀತಿಯಲ್ಲಿ ತೀರ್ಮಾನಿಸಿಕೊಳ್ಳಿರಿ. ಆದರೆ ನೀವು (ಸಂಭಾವನೆ ನಿಶ್ಚಯಿಸುವ ವಿಷಯದಲ್ಲಿ) ಪರಸ್ಪರರಿಗೆ ತೊಂದರೆ ಕೊಟ್ಟರೆ ಶಿಶುವಿಗೆ ಬೇರೊಬ್ಬ ಸ್ತ್ರೀಯ ಸ್ತನಪಾನ ಮಾಡಿಸಲಿ.

اَسْكِنُوْهُنَّ مِنْ حَيْثُ سَكَنْتُمْ مِّنْ وُّجْدِكُمْ وَلَا تُضَآرُّوْهُنَّ لِتُضَيِّقُوْا عَلَيْهِنَّ ۗ وَاِنْ كُنَّ اُولَاتِ حَمْلٍ فَاَنْفِقُوْا عَلَيْهِنَّ حَتّٰى يَضَعْنَ حَمْلَهُنَّ ۚ فَاِنْ اَرْضَعْنَ لَكُمْ فَاٰتُوْهُنَّ اُجُوْرَهُنَّ ۚ وَاْتَمِرُوْا بَيْنَكُمْ بِمَعْرُوْفٍ ۚ وَاِنْ تَعَاسَرْتُمْ فَسَتُرْضِعُ لَهٗۤ اُخْرٰى ⑥

7. ಸ್ಥಿತಿವಂತನು ತನ್ನ ಸ್ಥಿತಿಗನುಸಾರ ಜೀವನಾಂಶ ನೀಡಬೇಕು. ಕಡಿಮೆ ಜೀವನಾಧಾರ ನೀಡಲ್ಪಟ್ಟಿರುವವನು, ಅಲ್ಲಾಹನು ಆತನಿಗೆ ನೀಡಿರುವುದರಿಂದಲೇ ಖರ್ಚು ಮಾಡಲಿ. ಅಲ್ಲಾಹನು ಯಾರಿಗೆ ಎಷ್ಟು ಕೊಟ್ಟಿರುತ್ತಾನೋ ಅದಕ್ಕಿಂತ ಹೆಚ್ಚಿನ ತ್ರಾಸ ಅವನಿಗೆ ಕೊಡುವುದಿಲ್ಲ. ಅಲ್ಲಾಹನು ಬಡತನದ ಬಳಿಕ ಸಂಪನ್ನತೆಯನ್ನು ನೀಡಲೂಬಹುದು.

لِيُنْفِقْ ذُوْ سَعَةٍ مِّنْ سَعَتِهٖ ۗ وَمَنْ قُدِرَ عَلَيْهِ رِزْقُهٗ فَلْيُنْفِقْ مِمَّآ اٰتٰىهُ اللّٰهُ ۗ لَا يُكَلِّفُ اللّٰهُ نَفْسًا اِلَّا مَآ اٰتٰىهَا ۗ سَيَجْعَلُ اللّٰهُ بَعْدَ عُسْرٍ يُّسْرًا ⑦ ع

8. ಅದೆಷ್ಟೋ[9] ನಾಡುಗಳು ತಮ್ಮ ಪ್ರಭು ಮತ್ತು ಅವನ ಸಂದೇಶವಾಹಕರ ಆಜ್ಞೋಲ್ಲಂಘನೆ ಮಾಡಿದವು. ಆಗ ನಾವು

وَكَاَيِّنْ مِّنْ قَرْيَةٍ عَتَتْ عَنْ اَمْرِ رَبِّهَا وَرُسُلِهٖ فَحَاسَبْنٰهَا حِسَابًا

ಇವೆ. ಈ ಎಲ್ಲಾ ಸಂದರ್ಭಗಳಲ್ಲಿ ಸ್ತ್ರೀಯರ ಇದ್ದತ್ 'ನಿರಾಶೆಯ ವಯಸ್ಸಿನ' ಸ್ತ್ರೀಯರ ಇದ್ದತ್‌ನಷ್ಟೇ ಇದೆ. ಅಂದರೆ ತಲಾಕ್‌ನ ನಂತರ ಮೂರು ತಿಂಗಳು.

8. ಅರ್ಥಾತ್- ಪತಿ ನಿಧನನಾದ ತಕ್ಷಣ ಹೆರಿಗೆಯಾದರೆ ಅಥವಾ ನಾಲ್ಕು ತಿಂಗಳು ಹತ್ತು ದಿನಕ್ಕಿಂತ ಹೆಚ್ಚು ಅವಧಿ ತೆಗೆದುಕೊಂಡರೆ ಈ ಎರಡು ಸಂದರ್ಭಗಳಲ್ಲಿ ಹೆರಿಗೆಯಾದ ತಕ್ಷಣ ಆಕೆಯ ಇದ್ದತ್‌ನ ಅವಧಿ ಕೊನೆಗೊಳ್ಳುತ್ತದೆ.

9. ಈಗ ಮುಸ್ಲಿಮರನ್ನುದ್ದೇಶಿಸಿ ಅಲ್ಲಾಹನ ಗ್ರಂಥ ಮತ್ತು ಪ್ರವಾದಿಯ ಮೂಲಕ ಅವರಿಗೆ ನೀಡಲಾದ ಆದೇಶಗಳನ್ನು ಉಲ್ಲಂಘಿಸಿದರೆ ಇಹ-ಪರಗಳಲ್ಲಿ ಯಾವ ಪರಿಣಾಮವನ್ನೆದುರಿಸ ಬೇಕಾಗುತ್ತದೆ ಮತ್ತು ಅನುಸರಿಸಿದರೆ ಯಾವ ಪ್ರತಿಫಲವನ್ನು ಪಡೆಯುವಿರಿ ಎಂಬ ಆದೇಶವನ್ನು ನೀಡಲಾಗುತ್ತಿದೆ.

ಅವರನ್ನು ಉಗ್ರ ವಿಚಾರಣೆಗೆ ಒಳಪಡಿಸಿದೆವು ಮತ್ತು ಅವರನ್ನು ಉಗ್ರವಾಗಿ ಶಿಕ್ಷಿಸಿದೆವು.

شَدِيدًا وَعَذَّبْنٰهَا عَذَابًا نُّكْرًا ⑧

9. ಅವರು ತಮ್ಮ ಕರ್ಮದ ಸವಿಯನ್ನುಂಡರು ಮತ್ತು ಅವರ ಅಂತಿಮ ಗತಿಯು ನಷ್ಟವೇ ಆಗಿತ್ತು.

فَذَاقَتْ وَبَالَ اَمْرِهَا وَكَانَ عَاقِبَةُ
اَمْرِهَا خُسْرًا ⑨

10. ಅಲ್ಲಾಹನು (ಪರಲೋಕದಲ್ಲಿ) ಅವರಿಗಾಗಿ ಘೋರ ಯಾತನೆಯನ್ನು ಸಿದ್ಧಪಡಿಸಿಟ್ಟಿದ್ದಾನೆ. ಆದುದರಿಂದ ಸತ್ಯವಿಶ್ವಾಸಿಗಳಾಗಿರುವ ಬುದ್ಧಿಜೀವಿಗಳೇ, ಅಲ್ಲಾಹನನ್ನು ಭಯಪಡಿರಿ. ಅಲ್ಲಾಹನು ನಿಮ್ಮ ಕಡೆಗೆ ಒಂದು ಉಪದೇಶವನ್ನು ಅವತೀರ್ಣಗೊಳಿಸಿರುತ್ತಾನೆ.

اَعَدَّ اللّٰهُ لَهُمْ عَذَابًا شَدِيدًا فَاتَّقُوا
اللّٰهَ يٰۤاُولِي الْاَلْبَابِ الَّذِينَ اٰمَنُوا
قَدْ اَنْزَلَ اللّٰهُ اِلَيْكُمْ ذِكْرًا ⑩

11. ಸತ್ಯವಿಶ್ವಾಸಿಗಳನ್ನೂ ಸತ್ಕರ್ಮವೆಸಗುವವರನ್ನೂ ಅಂಧಕಾರಗಳಿಂದ ಹೊರತೆಗೆದು ಪ್ರಕಾಶದೆಡೆಗೆ ಒಯ್ಯಲಿಕ್ಕಾಗಿ ನಿಮಗೆ ಅಲ್ಲಾಹನ ಸುಸ್ಪಷ್ಟ ಮಾರ್ಗದರ್ಶನವನ್ನು ನೀಡುತ್ತಿರುವ ಒಬ್ಬ ಸಂದೇಶ ವಾಹಕ.[10] ಅಲ್ಲಾಹನ ಮೇಲೆ ವಿಶ್ವಾಸವಿರಿಸುವ ಹಾಗೂ ಸತ್ಕರ್ಮ ಮಾಡುವ ವ್ಯಕ್ತಿಯನ್ನು ಅಲ್ಲಾಹನು ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಸ್ವರ್ಗೋದ್ಯಾನಗಳಲ್ಲಿ ಪ್ರವೇಶಗೊಳಿಸುವನು. ಇವರು ಅದರಲ್ಲಿ ಸದಾಕಾಲ ವಾಸಿಸುವರು. ಇಂತಹವನಿಗೆ ಅಲ್ಲಾಹನು ಅತ್ಯುತ್ತಮ ಜೀವನಾಧಾರವನ್ನು ಇಟ್ಟಿರುವನು.

رَّسُولًا يَّتْلُوا عَلَيْكُمْ اٰيٰتِ اللّٰهِ مُبَيِّنٰتٍ
لِّيُخْرِجَ الَّذِينَ اٰمَنُوا وَعَمِلُوا الصّٰلِحٰتِ
مِنَ الظُّلُمٰتِ اِلَى النُّورِ وَمَنْ يُّؤْمِنْ
بِاللّٰهِ وَيَعْمَلْ صَالِحًا يُّدْخِلْهُ جَنّٰتٍ
تَجْرِي مِنْ تَحْتِهَا الْاَنْهٰرُ خٰلِدِينَ
فِيهَاۤ اَبَدًا قَدْ اَحْسَنَ اللّٰهُ لَهٗ رِزْقًا ⑪

12. ಸಪ್ತಗಗನಗಳನ್ನು ಮತ್ತು ಅವುಗಳಂತೆಯೇ ಭೂಮಿಯ ವಿಧದಿಂದಲೂ ಸೃಷ್ಟಿಸಿದವನು ಅಲ್ಲಾಹನೇ ಆಗಿದ್ದಾನೆ.[11] ಅವುಗಳ ನಡುವೆ ಆದೇಶಗಳು ಇಳಿಯುತ್ತಲೇ ಇರುತ್ತವೆ. ಅಲ್ಲಾಹನು ಎಲ್ಲದಕ್ಕೂ ಸಾಮರ್ಥ್ಯವುಳ್ಳವನು ಮತ್ತು ಅಲ್ಲಾಹನ ಜ್ಞಾನವು ಎಲ್ಲ ವಿಷಯಗಳಿಗೂ ವ್ಯಾಪಿಸಿಕೊಂಡಿದೆ ಎಂಬುದನ್ನು ನೀವು ತಿಳಿದುಕೊಳ್ಳುವಂತಾಗಲು (ನಿಮಗಿದನ್ನು ತಿಳಿಸಲಾಗುತ್ತಿದೆ).

اَللّٰهُ الَّذِي خَلَقَ سَبْعَ سَمٰوٰتٍ وَّمِنَ
الْاَرْضِ مِثْلَهُنَّ يَتَنَزَّلُ الْاَمْرُ
بَيْنَهُنَّ لِتَعْلَمُوۤا اَنَّ اللّٰهَ عَلٰى كُلِّ شَيْءٍ
قَدِيرٌ وَّاَنَّ اللّٰهَ قَدْ اَحَاطَ بِكُلِّ
شَيْءٍ عِلْمًا ⑫

10. ಉಪದೇಶವೆಂದರೆ ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಎಂದರೆ ಮುಹಮ್ಮದ್(ಸ)ರಾಗಿದ್ದಾರೆಂದು ಕೆಲವು ವ್ಯಾಖ್ಯಾನಕಾರರು ಅಭಿಪ್ರಾಯಪಟ್ಟಿದ್ದಾರೆ. ಮತ್ತೆ ಕೆಲವರ ಪ್ರಕಾರ ಉಪದೇಶವೆಂದರೂ ಪ್ರವಾದಿವರ್ಯರೇ(ಸ) ಆಗಿದ್ದಾರೆ. ಏಕೆಂದರೆ ಅವರ ವ್ಯಕ್ತಿತ್ವವೇ ಸಾದ್ಯಂತ ಉಪದೇಶವಾಗಿತ್ತು. ನಮ್ಮ ದೃಷ್ಟಿಯಲ್ಲಿ ಎರಡನೆಯ ವ್ಯಾಖ್ಯಾನವೇ ಹೆಚ್ಚು ಸೂಕ್ತವಾಗಿದೆ.

11. 'ಅವುಗಳಂತೆಯೇ' ಎಂಬುದರ ಅರ್ಥ ಅವನು ಎಷ್ಟು ಆಕಾಶಗಳನ್ನು ಸೃಷ್ಟಿಸಿದ್ದಾನೋ ಅಷ್ಟೇ ಭೂಮಿಗಳನ್ನೂ ಸೃಷ್ಟಿಸಿದ್ದಾನೆ ಎಂದಲ್ಲ. ಬದಲಾಗಿ ಅವನು ಅನೇಕ ಆಕಾಶಗಳನ್ನು ಸೃಷ್ಟಿಸಿರುವಂತೆಯೇ ಅನೇಕ ಭೂಮಿಗಳನ್ನೂ ಸೃಷ್ಟಿಸಿದ್ದಾನೆ ಎಂದಾಗಿದೆ. 'ಭೂಮಿಯ ವಿಧದಿಂದ' ಎಂದರೆ ಯಾವ ರೀತಿ ಮಾನವರು ವಾಸಿಸುವ ಈ ಭೂಮಿ ಅದರೊಳಗೊಂಡಿರುವ ಸಕಲ ವಸ್ತುಗಳ ಪಾಲಿಗೆ ಹಾಸು ಮತ್ತು ತೊಟ್ಟಿಲಾಗಿದೆಯೋ ಅದೇ ರೀತಿ ಅಲ್ಲಾಹನು ನಿಸರ್ಗದಲ್ಲಿ ಇತರ ಭೂಮಿಗಳನ್ನೂ ಸೃಷ್ಟಿಸಿದ್ದಾನೆ. ಅವು ತಮ್ಮ ವಾಸಿಗಳ ಪಾಲಿಗೆ ಹಾಸೂ ತೊಟ್ಟಿಲೂ ಆಗಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಆಕಾಶದಲ್ಲಿ ಗೋಚರಿಸುವ ಅಸಂಖ್ಯ ಗ್ರಹನಕ್ಷತ್ರಾದಿಗಳು ನಿರ್ಜನವಾಗಿ ಉಳಿದಿಲ್ಲ. ಅವುಗಳಲ್ಲೂ ಭೂಮಿಯಂತೆ ತಮ್ಮದೇ ಆದ ಜೀವಜಾಲಗಳಿವೆ.